# First Semester Three Year LL.B. Examination, January 2010
## CONSTITUTION (Course – II)

Duration : 3 Hours

Max. Marks : 100

**Instructions** : 1. Answer all **5** Questions.

2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the right indicate marks.
4. Answer should be written **either** in English or Kannada **completely**.

## UNIT – I

Q. No. 1. (a) Explain the right to life and personal liberty as provided under Art. 21 of the Constitution.

ಸಂವಿಧಾನದ ಅನುಚ್ಛೇದ 21 ರಲ್ಲಿ ತಿಳಿಸಿದಂತೆ ಪ್ರಾಣ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ವಿವರಿಸಿರಿ.

OR/ಅಥವಾ

Marks : 15

Discuss the fundamental rights of minorities under the Indian Constitution.

ಭಾರತದ ಸಂವಿಧಾನದಡಿ ಅಲ್ಪ ಸಂಖ್ಯಾತರಿಗೆ ಇರುವ ಮೂಲಭೂತ ಹಕ್ಕುಗಳನ್ನು ಚರ್ಚಿಸಿ.

(b) The State of Karnataka has imposed 30% entertainment tax on cinema theatres in Metropolitan cities, 20% tax in other cities and 10% tax in rural areas by an Act. The constitutional validity of the Act is challenged. Decide.

ಕರ್ನಾಟಕ ರಾಜ್ಯವು ಒಂದು ಶಾಸನದ ಮೂಲಕ ಮೆಟ್ರೊಪಾಲಿಟನ್ ನಗರಗಳಲ್ಲಿಯ ಚಿತ್ರ ಮಂದಿರಗಳಿಗೆ ಮನರಂಜನಾ ತೆರಿಗೆಯಾಗಿ 30% ತೆರಿಗೆ, ಉಳಿದ ಶಹರಗಳಲ್ಲಿದ್ದರೆ 20% ತೆರಿಗೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿದ್ದರೆ 10% ತೆರಿಗೆಯನ್ನು ವಿಧಿಸಿತು. ಈ ಶಾಸನದ ಸಂವೈಧಾನಿಕತೆಯನ್ನು ಪ್ರಶ್ನಿಸಲಾಗಿದೆ. ತೀರ್ಮಾನಿಸಿ.

Marks : 5

OR/ಅಥವಾ

"Humsafar", an organisation formed for the welfare of prostitutes has challenged the provisions of the Immoral Traffic Act on the ground that it violates their freedom of business. Decide.

ವೇಶ್ಯೆಯರ ಕಲ್ಯಾಣಕ್ಕಾಗಿ ರಚಿಸಲಾದ "ಹಮ್‌ಸಫರ್" ಎನ್ನುವ ಸಂಸ್ಥೆಯು ವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯ ಆಧಾರದ ಮೇಲೆ ಅನೈತಿಕ ವ್ಯಾಪಾರದ ಅಧಿನಿಯಮವನ್ನು ಪ್ರಶ್ನಿಸಿದೆ. ನಿರ್ಧರಿಸಿ.

## UNIT – II

Q. No. 2. (a) How the President of India is elected ? What are his functions ? Marks : 15

ಭಾರತದ ರಾಷ್ಟ್ರಾಧ್ಯಕ್ಷರನ್ನು ಹೇಗೆ ಚುನಾಯಿಸಲಾಗುವುದು ? ಅವರ ಕಾರ್ಯಗಳೇನು ?

OR/ಅಥವಾ

Explain the significance of Directive Principles of State Policy.

ರಾಜ್ಯನೀತಿ ನಿರ್ದೇಶನ ತತ್ವಗಳ ಮಹತ್ವವನ್ನು ವಿವರಿಸಿರಿ.

(b) Write a short note on fundamental duties. Marks : 5

ಮೂಲಭೂತ ಕರ್ತವ್ಯಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Write a short note on bicamaralism.

ದ್ವಿಸದನದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

## UNIT – III

Q. No. 3. (a) Describe different jurisdictions of the Supreme Court. Marks : 15

ಸರ್ವೋಚ್ಚ ನ್ಯಾಯಾಲಯದ ವಿವಿಧ ಅಧಿಕಾರ ವ್ಯಾಪ್ತಿಗಳನ್ನು ವಿವರಿಸಿರಿ.

OR/ಅಥವಾ

How independence of judiciary is sought to be achieved under the Constitution ?

ಸಂವಿಧಾನದಡಿ ನ್ಯಾಯಾಂಗದ ಸ್ವಾತಂತ್ರ್ಯತೆಯನ್ನು ಹೇಗೆ ಸಾಧಿಸಲು ಪ್ರಯತ್ನಿಸಲಾಗಿದೆ ?

(b) Write a short note on 'Judicial Restraint'. Marks : 5

"ನ್ಯಾಯಾಲಯಗಳು ನಿರ್ಬಂಧದಲ್ಲಿರುವುದ"ರ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Write a short note on 'Public Interest Litigation'.

'ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯ'ದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

## UNIT – IV

Q. No. 4. (a) Critically evaluate the extent of power to amend the Constitution. Marks : 15

ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರದ ವ್ಯಾಪ್ತಿಯನ್ನು ವಿಮರ್ಶಾತ್ಮಕವಾಗಿ ಮೌಲ್ಯೀಕರಿಸಿರಿ.

OR/ಅಥವಾ

Explain the provisions relating to freedom of inter-state trade.

ಅಂತರ್ ರಾಜ್ಯ ವ್ಯಾಪಾರದ ಸ್ವಾತಂತ್ರ್ಯಕ್ಕೆ ಸಂಬಂಧಿತ ನಿಯಮಗಳನ್ನು ವಿವರಿಸಿರಿ.

(b) An Act of a State providing for 72% of reservation of posts in Government services is inserted into the Ninth Schedule of the Constitution through a Constitutional amendment. An unemployed graduate wants to challenge this amendment. Advise him. Marks : 5

ಸರಕಾರಿ ಸೇವೆಗಳಲ್ಲಿ 72% ಹುದ್ದೆಗಳನ್ನು ಮೀಸಲಿರಿಸಿದ ಒಂದು ರಾಜ್ಯದ ಶಾಸನವನ್ನು ಸಂವಿಧಾನದ ತಿದ್ದುಪಡಿಯ ಮೂಲಕ ಒಂಬತ್ತನೆಯ ಅನುಬಂಧದಲ್ಲಿ ಅಳವಡಿಸಲಾಗಿದೆ. ನಿರುದ್ಯೋಗಿ ಪದವೀಧರನೊಬ್ಬ ಈ ತಿದ್ದುಪಡಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಯಸಿದ್ದಾನೆ. ಅವನಿಗೆ ಸಲಹೆ ನೀಡಿರಿ.

OR/ಅಥವಾ

The places of worship of a minority community are attacked throughout a State. The Central Government gave detailed directions and urged the State to take effective action. The Chief Minister of the State wants your advise on whether the Central Government has power to give such directions and what may happen if the directions are not implemented.

ಒಂದು ರಾಜ್ಯಾದ್ಯಾಂತ ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆದಿದೆ. ಕೇಂದ್ರ ಸರಕಾರವು ಆ ರಾಜ್ಯಕ್ಕೆ ವಿವರವಾದ ನಿರ್ದೇಶನಗಳನ್ನು ನೀಡಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ. ಕೇಂದ್ರ ಸರಕಾರಕ್ಕೆ ಅಂತಹ ನಿರ್ದೇಶನಗಳನ್ನು ನೀಡಲು ಅಧಿಕಾರವಿದೆಯೇ ಮತ್ತು ಆ ನಿರ್ದೇಶನಗಳನ್ನು ಜಾರಿ ಮಾಡದೇ ಇದ್ದಲ್ಲಿ ಪರಿಣಾಮವೇನಾಗಬಹುದು ಎನ್ನುವುದರ ಬಗ್ಗೆ ಆ ರಾಜ್ಯದ ಮುಖ್ಯಮಂತ್ರಿಗಳು ನಿಮ್ಮ ಸಲಹೆಯನ್ನು ಕೇಳಿದ್ದಾರೆ. ಸಲಹೆ ನೀಡಿರಿ.

## UNIT – V

Q. No. 5. (a) What is National emergency ? Discuss its effects on fundamental rights. Marks : 15

ರಾಷ್ಟ್ರೀಯ ತುರ್ತು ಪರಿಸ್ಥಿತಿ ಎಂದರೇನು ? ಮೂಲಭೂತ ಹಕ್ಕುಗಳ ಮೇಲೆ ಅದರ ಪರಿಣಾಮವನ್ನು ಚರ್ಚಿಸಿ.

OR/ಅಥವಾ

Explain the provisions relating to contractual liabilities of Government.

ಒಪ್ಪಂದಗಳಡಿ ಸರಕಾರದ ಹೊಣೆಗಾರಿಕೆಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

(b) 'B' an I.A.S. Officer is promoted to higher post ignoring the seniority of 'A'. Can 'A' successfully challenge it ? Marks : 5

'ಬಿ' ಎಂಬ ಐ.ಎ.ಎಸ್. ಅಧಿಕಾರಿಯನ್ನು 'ಎ' ಎನ್ನುವವನ ಜೇಷ್ಠತೆಯನ್ನು ಕಡೆಗಣಿಸಿ, ಉನ್ನತ ಹುದ್ದೆಗೆ ಬಡ್ತಿ ನೀಡಲಾಗಿದೆ. 'ಎ' ನು ಇದನ್ನು ನ್ಯಾಯಾಲಯದಲ್ಲಿ ಯಶಸ್ವಿಯಾಗಿ ಪ್ರಶ್ನಿಸಬಹುದೆ?

OR/ಅಥವಾ

A military truck, while carrying a football team of jawans, caused an accident. 'A', a pedestrian died in the accident. His wife has sued the Central Government for compensation. Will she succeed ?

ಸೈನಿಕರ ಫುಟ್‌ಬಾಲ್ ತಂಡವನ್ನು ಮಿಲಿಟರಿ ವಾಹನದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ದುರ್ಘಟನೆಗೀಡಾಯಿತು. ಆ ದುರ್ಘಟನೆಯಲ್ಲಿ 'ಎ' ಎಂಬ ಪಾದಚಾರಿಯು ಸಾವನ್ನಪ್ಪಿದನು. ಅವನ ಪತ್ನಿಯು ಪರಿಹಾರ ಕೋರಿ ಕೇಂದ್ರ ಸರಕಾರದ ವಿರುದ್ಧ ದಾವೆ ಹೂಡಿದ್ದಾಳೆ. ಅವಳು ಯಶಸ್ವಿಯಾಗುವಳೆ?

---